MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 11-11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಸತತ 3 ನೇ ದಿನ ಮಲೇಶಿಯನ್ ಪಾಮೆಣ್ಣೆ ದರ ಕುಸಿತ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 3 ನೇ ದಿನ ಕುಸಿತ ಕಂಡು 10 ದಿನಗಳ ಕನಿಷ್ಠ ಮಟ್ಟ ತಲುಪಿದೆ. 1.83 ಶೇಕಡಾ ಕುಸಿತದೊಂದಿಗೆ ಟನ್‌ಗೆ 4121 ರಿಂಗಿಟ್ಸ್ – $ 875.88 ಆಗಿದೆ. ಚೈನಾದ ಕೋವಿಡ್ ನೀತಿಯಿಂದ ರಫ್ತು ಬೇಡಿಕೆ ಇಳಿಕೆ ಹಾಗೂ ಇತರ ಪರ್ಯಾಯ ಖಾದ್ಯತೈಲಗಳ ದರ ಇಳಿಕೆಯಿಂದ ಪಾಮೆಣ್ಣೆ ದರ ಇಳಿಕೆಯಾಗಿದೆಯೆನ್ನಲಾಗಿದೆ.

## ಭಾರತದ ಜೋಳಕ್ಕೆ ರಫ್ತು ಬೇಡಿಕೆ ಹೆಚ್ಚಳ

ಭಾರತದ ಪಾರಂಪರಿಕ ಜೋಳಕ್ಕೆ (ಕುಲಾಂತರಿಯಲ್ಲದ) ರಫ್ತು ಬೇಡಿಕೆ ಹೆಚ್ಚಳವಾಗಿದೆಯೆನ್ನಲಾಗಿದೆ. ಯುರೋಪಿಯನ್ ಯೂನಿಯನ್, ವಿಯೆಟ್ನಾಂ, ಮಲೇಶಿಯಾ ಮುಂತಾದ ದೇಶಗಳಿಂದ ಬೇಡಿಕೆ ಹೆಚ್ಚಳವಾಗಿದೆಯೆನ್ನಲಾಗಿದೆ. ದೇಶೀ ಮಾರುಕಟ್ಟೆಯಲ್ಲೂ ಬೇಡಿಕೆ ಹೆಚ್ಚಳವಾಗುತ್ತಿದ್ದು ದರ ಹೆಚ್ಚಳ ಸಾಧ್ಯತೆಯಿದೆಯೆನ್ನಲಾಗಿದೆ.

## ರಫ್ತು ಅವಕಾಶದ ನಾಲ್ಕೇ ದಿನಗಳಲ್ಲಿ 1 ಮಿಲಿಯನ್ ಟನ್ ಸಕ್ಕರೆ ಕರಾರು

ಈ ಸೀಸನ್ ನ ರಫ್ತು ಅವಕಾಶ ನೀಡಿದ ನಾಲ್ಕೇ ದಿನಗಳಲ್ಲಿ ಸಕ್ಕರೆ ಕಾರ್ಖಾನೆಗಳು 1 ಮಿಲಿಯನ್ ಟನ್ ಸಕ್ಕರೆ ರಫ್ತು ಕರಾರು ಮಾಡಿಕೊಂಡಿವೆಯೆನ್ನಲಾಗಿದೆ. ಸರಕಾರ ಅವಕಾಶ ನೀಡಿದ 6 ಮಿಲಿಯನ್ ಟನ್ ಸಕ್ಕರೆ ರಫ್ತು ಕೋಟಾವನ್ನು ಮಿಲ್‌ಗಳು ಡಿಸೆಂಬರ್ ಅಂತ್ಯದೊಳಗೆ ಮುಗಿಸುವ ಸಾಧ್ಯತೆಯಿದೆಯೆನ್ನಲಾಗಿದೆ.